# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 04-09-2021 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು<br>2. ಡಾ॥ ಸುಕನ್ಯಾ, ಆರೋಗ್ಯಾಧಿಕಾರಿಗಳು – ಸದಸ್ಯರು<br>3. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು – ಸದಸ್ಯರು<br>4. ಶ್ರೀ ವಿಜಯರಾಜ್ ಎಸ್ ಕಿರಿಯ ಆರೋಗ್ಯ ಪರಿವೀಕ್ಷಕರು ವಾ.ನಂ.-49<br>5. ಶ್ರೀ. ಮಹಮದ್ ರೆಹಮತುಲ್ಲಾ, ಕೆಲಸ ಪರಿವೀಕ್ಷಕರು – ಸದಸ್ಯರು<br>6. ಶ್ರೀ. ರಾಜಪ್ಪ ಎಂ.ಎಲ್, ಮಾರ್ಷಲ್ | 1. ಶ್ರೀ ಜಿ.ನಾರಾಯಣಸ್ವಾಮಿ<br>2. ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ<br>3. ಶ್ರೀ ಕನ್ನಡರಾಜು<br>4. ಶ್ರೀ ಉಮೇಶ್<br>5. ಶ್ರೀ ಪಿ.ಕಿರೀಟಪ್ಪ<br>6. ಶ್ರೀ. ಸ್ವಾಮಿ<br>7. ಶ್ರೀಮತಿ. ತಿಲಗವತಿ, ಲಿಂಕ್‌ವರ್ಕರ್ |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ. 49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಘನತ್ಯಾಜ್ಯ ನಿರ್ವಹಣೆ ಬಗ್ಗೆ:-

ಸದರಿ ವಾರ್ಡ್‌ನ ಕೆಎಸ್‌ಎಫ್‌ಸಿ ಬಡಾವಣೆಯ ಸ್ಮಶಾನದ ಹತ್ತಿರ ಹಾಗೂ ಇತರೆಡೆ ಒಟ್ಟು 03 ಬ್ಲಾಕ್ ಸ್ಪಾಟ್ ಇದ್ದು, ಕಸದ ರಾಶಿ ತುಂಬಾ ಇರುತ್ತದೆ ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಕವರ್‌ಗಳಲ್ಲಿ ಕಸಗಳನ್ನು ತಂದು ಹಾಕುತ್ತಿದ್ದು, ಇದನ್ನು ನಿಯಂತ್ರಿಸಲು ರಾತ್ರಿವೇಳೆಯಲ್ಲಿ ಪಾಲಿಕೆ ವತಿಯಿಂದ ಮಾರ್ಷಲ್‌ಗಳನ್ನು ನಿಯೋಜಿಸಲು ಸದಸ್ಯರು ಕೋರಿರುತ್ತಾರೆ.

ವಾರ್ಡ್ ನಂ.49 ಲಿಂಗರಾಜಪುರದ ಕಿರಿಯ ಆರೋಗ್ಯ ಪರಿವೀಕ್ಷಕರು ಈ ಬಗ್ಗೆ ಮಾತನಾಡುತ್ತಾ, ಸದರಿ ವಾರ್ಡ್‌ನಲ್ಲಿ ಈ ಹಿಂದೆ 37 ಬ್ಲಾಕ್‌ಸ್ಪಾಟ್‌ಗಳಿದ್ದು, ಅದರಲ್ಲಿ 34 ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದೆ ಸದರಿ ಕಾರ್ಯಕ್ಕೆ ಮಾನ್ಯ ಮುಖ್ಯ ಆಯುಕ್ತರು ಮೆಚ್ಚುಗೆ ವ್ಯಕ್ತಪಡಿಸಿ ಬಹುಮಾನವನ್ನು ಸಹ ನೀಡಿರುತ್ತಾರೆ. ಅದರಂತೆ ಬಾಕಿ ಇರುವ 03 ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲು ಕ್ರಮಜರುಗಿಸಿ ಸದರಿ ಜಾಗದಲ್ಲಿ ರಾತ್ರಿ ವೇಳೆಯಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಲು ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು ಮತ್ತು ಸದರಿ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಹಾಗೂ ಸಾರ್ವಜನಿಕರು ಕಸ ಹಾಕದಂತೆ ತಡೆಯುವ ನಿಟ್ಟಿನಲ್ಲಿ ವಾರ್ಡ್ ಸಮಿತಿ ಸದಸ್ಯರು ಸಹಕಾರ ನೀಡಲು ಮನವಿ ಮಾಡಿರುತ್ತಾರೆ.

ಪು.ತಿ.ನೋ

Scanned with CamScanner

ಸದರಿ ವಾರ್ಡ್‌ನಲ್ಲಿ ಒಟ್ಟು 25 ಆಟೋ ಟಿಪ್ಪರ್‌ಗಳು, 02 ಕಾಂಪ್ಯಾಕ್ಟರ್ ಇದ್ದು, ಸದರಿ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದ್ದು, ಸಾವಜನಿಕರಿಗೆ ಮಾಹಿತಿ ನೀಡಲು ಟಿಪ್ಪರ್‌ಗಳಲ್ಲಿ ಆಡೀಯೋ ಜಾಹೀರಾತುಗಳನ್ನು ಹಾಕಲಾಗುತ್ತದೆ. 43 ಮಂದಿ ಪಾಲಿಕೆಯ ಪೌರಕಾರ್ಮಿಕರಿದ್ದು, 26 ಮಂದಿ ಗುತ್ತಿಗೆ ಪೌರಕಾರ್ಮಿಕರು ಸೇರಿ ಒಟ್ಟು 69 ಮಂದಿ ಪೌರಕಾರ್ಮಿಕರು ಸದರಿ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ ಎಂಬುದಾಗಿ ಮಾಹಿತಿ ನೀಡಿದರು.

<u>ಕೋವಿಡ್-19 ನಿಯಂತ್ರಣದ ಬಗ್ಗೆ:-</u>

ಕೋವಿಡ್-19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸದಸ್ಯರು ವಿವರವಾದ ಮಾಹಿತಿಗಳನ್ನು ಸಭೆಯ ಮುಂದೆ ಇಡಲು ಆರೋಗ್ಯಾಧಿಕಾರಿಗಳನ್ನು ಕೋರಿದರು.

ಡಾ|| ಸುಕನ್ಯ, ಆರೋಗ್ಯವೈದ್ಯಾಧಿಕಾರಿ ರವರು ಈ ಬಗ್ಗೆ ಮಾತನಾಡುತ್ತಾ ಸದರಿ ವಾರ್ಡ್‌ನಲ್ಲಿ ಇದುವರೆಗೆ 45 ವರ್ಷ ಮೇಲ್ಪಟ್ಟ 8779 ಮಂದಿ, 18 ವರ್ಷ ಮೇಲ್ಪಟ್ಟ 8024 ಮಂದಿ, ಫ್ರಂಟ್‌ಲೈನ್ ನೌಕರರು 912 ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿ 743 ಮಂದಿ ಸೇರಿ ಒಟ್ಟು 18458 ಜನರಿಗೆ ಕೋವಿಡ್ ನಿಯಂತ್ರಣ ಲಸಿಕೆಯನ್ನು ಹಾಕಲಾಗಿರುತ್ತದೆ ಪ್ರತಿ ದಿನ 500 ಡೋಸ್‌ಗಳನ್ನು ಸರಬರಾಜು ಮಾಡುತ್ತಿದ್ದು, ಕ್ಯಾಂಪ್‌ಗಳಲ್ಲಿ ಹಾಗೂ ಮೊಬೈಲ್ ತಂಡದ ನೆರವಿನೊಂದಿಗೆ ಸಾರ್ವಜನಿಕರಿಗೆ ಹಾಗೂ ಹೋಟೆಲ್ ಕಾರ್ಮಿಕರಿಗೆ ಮತ್ತು ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರುಗಳಿಗೆ ಕೋವಿಡ್ ಲಸಿಕೆಗಳನ್ನು ಹಾಕಲಾಗುತ್ತಿದೆ. ಸದರಿ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ 69 ಪೌರಕಾರ್ಮಿಕರು, ಆಟೋ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕರು ಹಾಗೂ ಇತರೆ ಕೆಲಸಗಾರರಿಗೆ 02 ಡೋಸ್ ಲಸಿಕೆಗಳನ್ನು ಹಾಕಲಾಗಿರುತ್ತದೆ ಮತ್ತು ಪೌರಕಾರ್ಮಿಕರುಗಳಿಗೆ ಕೋವಿಡ್ ಲಸಿಕೆ ಪಡೆದಿರುವ ಬಗ್ಗೆ ಕೋವಿಡ್ ಲಸಿಕೆ ಪ್ರಮಾಣ ಪತ್ರ ನೀಡಲು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು ಮತ್ತು ಕೋವಿಡ್ ಲಸಿಕೆ ನೀಡುವ ಸ್ಥಳಗಳಲ್ಲಿ ಸಾರ್ವಜನಿಕರ ಜನಸಂದಣಿ ಹೆಚ್ಚಾಗುತ್ತಿರುವ ಕಾರಣ ಜನಸಂದಣಿ ನಿಯಂತ್ರಿಸಲು ಪೋಲೀಸ್ ನಿಯೋಜಿಸಲು ಕೋರಿದರು.

ಸದರಿ ಸ್ಥಳಗಳಲ್ಲಿ ಲಸಿಕೆ ಕಾರ್ಯಕ್ರಮ ಇರುವ ದಿನಾಂಕ ಹಾಗೂ ಸ್ಥಳದ ವಿವರಗಳೊಂದಿಗೆ ಸಂಬಂಧಪಟ್ಟ ಪೋಲೀಸ್ ಠಾಣೆಗೆ ಈ ಬಗ್ಗೆ ಪತ್ರ ಬರೆಯುವಂತೆ ಆರೋಗ್ಯವೈದ್ಯಾಧಿಕಾರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜೆರಾಕ್ಸ್ ಮಷೀನ್, ಕಂಪ್ಯೂಟರ್ ಪ್ರಿಂಟರ್‌ಗಳನ್ನು ಒದಗಿಸುವಂತೆ ವಲಯದ ಆರೋಗ್ಯಾಧಿಕಾರಿಗಳಿಗೆ ಪತ್ರ ಬರೆಯುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಮು.ತಿ.ನೋ,

Scanned with CamScanner

<u>ಕಾಮಗಾರಿ ಇಲಾಖೆ:-</u>

ಸದರಿ ವಾರ್ಡ್‌ನಲ್ಲಿ ರಸ್ತೆ ಬದಿಯ ಮಳೆ ನೀರು ಚರಂಡಿಯ ಮಣ್ಣು ಹಾಗೂ ಕಸಗಳನ್ನು ಸಾಗಿಸಲು ಟ್ರ್ಯಾಕ್ಟರ್ ಹಾಗೂ ಕೆಲಸಗಾರರು ಇಲ್ಲದಿರುವುದರಿಂದ ವಾರ್ಡ್‌ನ ಎಲ್ಲಾ ರಸ್ತೆ ಬದಿಗಳಲ್ಲಿ ಮಣ್ಣು ಹಾಗೂ ಕಸ ತುಂಬಿದ್ದು, ಸಾರ್ವಜನಿಕರು ಓಡಾಡಲು ಹಾಗೂ ವಾಹನಗಳು ಸರಾಗವಾಗಿ ಹೋಗಲು ತೊಂದರೆ ಉಂಟಾಗುತ್ತಿದೆ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಮಿತಿ ಸದಸ್ಯರು ಕೋರಿದರು. ಸದರಿ ವಾರ್ಡ್‌ನಲ್ಲಿ ಸಹಾಯಕ ಅಭಿಯಂತರರ ಹುದ್ದೆ ಖಾಲಿ ಇದ್ದು ಹಾಲಿ ವಾರ್ಡ್ ನಂ.27 ಬಾಣಸವಾಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಅಭಿಯಂತರರು ಸದರಿ ವಾರ್ಡ್‌ನ ಪ್ರಭಾರವನ್ನು ವಹಿಸಿಕೊಂಡಿರುತ್ತಾರೆ. ಸದರಿ ಸಹಾಯಕ ಅಭಿಯಂತರರು 02 ವಾರ್ಡ್‌ಗಳಲ್ಲಿ ಕಾರ್ಯನಿರ್ವಹಿಸಲು ಕಷ್ಟಕರವಾಗಿರುವುದರಿಂದ ಸದರಿ ವಾರ್ಡ್‌ಗೆ ಹೊಸದಾಗಿ ಯಾರಾದರು ಬೇರೆ ಸಹಾಯಕ ಅಭಿಯಂತರರುನ್ನು ನಿಯೋಜಿಸಲು ಸಮಿತಿ ಸದಸ್ಯರು ಕೋರಿರುತ್ತಾರೆ.

ಸದರಿ ವಿಷಯನ್ನು ಮಾನ್ಯ ಜಂಟಿ ಆಯುಕ್ತರು(ಪೂರ್ವ ವಲಯ) ರವರ ಅವಗಾಹನೆಗೆ ತರುವುದಾಗಿ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ಸದರಿ ವಾರ್ಡ್‌ನಲ್ಲಿ ಇತ್ತೀಚಿನ ಮಳೆಯಿಂದ ರಸ್ತೆಗಳೆಲ್ಲಾ ಹಾಳಾಗಿದ್ದು ರಸ್ತೆ ತುಂಬಾ ಪಾಟ್‌ಹೋಲ್ಸ್‌ಗಳಿದ್ದು ವಾಹನ ಸಂಚಾರರಿಗೆ ತೊಂದರೆಯಾಗುತ್ತಿರುವುದರಿಂದ ವಾರ್ಡ್‌ನ ಎಲ್ಲಾ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಮಾನ್ಯ ಶಾಸಕರು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ರವರು ಪೂಜಾ ಕಾರ್ಯನೆರವೇರಿಸಿದ್ದರೂ ಸಹ ಇದುವರೆಗೆ ಡಾಂಬರೀಕರಣ ಕಾರ್ಯ ಪ್ರಾರಂಭಗೊಂಡಿರುವುದಿಲ್ಲ ಈ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ಡಾಂಬರೀಕರಣ ಪ್ರಾರಂಭಿಸಲು ಸೂಚಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಮಿತಿ ಸದಸ್ಯರು ಕೋರಿದರು.

ಸಭೆಯಲ್ಲಿ ವಾರ್ಡ್‌ನ ಸಹಾಯಕ ಅಭಿಯಂತರರು ಗೈರು ಹಾಜರಾಗಿದ್ದುದರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರೊಂದಿಗೆ ದೂರವಾಣಿ ಮೂಲಕ ರಸ್ತೆ ಡಾಂಬರೀಕರಣದ ಬಗ್ಗೆ ಚರ್ಚಿಸಲಾಗಿ ಆದಷ್ಟು ಬೇಗನೇ ಕೆಲಸ ಪ್ರಾರಂಭಿಸುವುದಾಗಿ ಭರವಸೆ ನೀಡಿರುತ್ತಾರೆ.

ಕೆ.ಎಸ್.ಎಫ್.ಸಿ ಬಡಾವಣೆಯ ಸ್ಮಶಾನದ ಸುತ್ತಲೂ ಕಾಂಪೌಂಡ್ ನಿರ್ಮಿಸಲು ಸಮಿತಿ ಸದಸ್ಯರು ಒತ್ತಾಯಿಸಿದರು.

<u>ಬೀದಿ ದೀಪ ನಿರ್ವಹಣೆ ಕುರಿತು</u>

ಕೆ.ಎಸ್.ಎಫ್.ಸಿ ಬಡಾವಣೆಯ ಸ್ಮಶಾನದ ಬಳಿ ಬೀದಿ ದೀಪ ಉರಿಯುತ್ತಿಲ್ಲ ಈ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಕೋರಿದರು.

ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ವಿದ್ಯುತ್ ಗುತ್ತಿಗೆದಾರರಿಗೆ ಸೂಚಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಪು.ತಿ.ನೋ,

Scanned with CamScanner

<u>ಬೆಸ್ಕಾಂ:-</u>

ಬೆಸ್ಕಾಂ ಗುತ್ತಿಗೆದಾರರು ಕೇಬಲ್‌ಗಳನ್ನು ಅಳವಡಿಸಲು ವಾರ್ಡ್‌ನ ಕೆಲವು ರಸ್ತೆಗಳನ್ನು ಅಗೆದಿದ್ದು ಸರಿಯಾಗಿ ಮುಚ್ಚಿರುವುದಿಲ್ಲ ಎಂದು ಸಮಿತಿ ಸದಸ್ಯರು ತಿಳಿಸಿದರು.

<u>ಬಿಡಬ್ಲ್ಯೂಎಸ್ಎಸ್‌ಬಿ:-</u>

ಬಿಡಬ್ಲ್ಯೂಎಸ್ಎಸ್‌ಬಿ ಗುತ್ತಿಗೆದಾರರು ಕೂಡ ಪೈಪ್‌ಗಳನ್ನು ಅಳವಡಿಸಲು ವಾರ್ಡ್‌ನ ಕೆಲವು ರಸ್ತೆಗಳನ್ನು ಅಗೆದಿದ್ದು ಸರಿಯಾಗಿ ಮುಚ್ಚಿರುವುದಿಲ್ಲ ಎಂದು ಸಮಿತಿ ಸದಸ್ಯರು ತಿಳಿಸಿದರು.

<u>ನಿರಾಶ್ರಿತರ ಶಿಬಿರ:-</u>

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಬಿಬಿಎಂಪಿ ವತಿಯಿಂದ ಸದರಿ ವಾರ್ಡ್‌ನ ಕೆ.ಎಸ್.ಎಫ್.ಸಿ ಬಡಾವಣೆಯ ಪಾಲಿಕೆಯ ಸಮುದಾಯ ಭವನದಲ್ಲಿ ನಿರಾಶ್ರಿತರ ಶಿಬಿರ ತೆರೆಯಲು ಉದ್ದೇಶಿಸಲಾಗಿದ್ದು, ಸದರಿ ನಿರಾಶ್ರಿತರ ಶಿಬಿರಕ್ಕೆ ನೀರು, ವಿದ್ಯುತ್ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಸಭೆಯು 12-30 ಗಂಟೆಗೆ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

04.09.24

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

ಪ್ರತಿಯನ್ನು,

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ,
3. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಅವಗಾಹನೆಗೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್‌ಬಿ ರವರ ಅವಗಾಹನೆಗೆ ರವಾನಿಸಿದೆ.
7. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
8. ಕಛೇರಿ ಕಡತಕ್ಕೆ.

Scanned with CamScanner